**ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:- 3ನೇ ಪ್ರತಿವಾದಿ ಪರ ಶ್ರೀ ಎಸ್.ಜಿ.ಎಸ್. ವಕೀಲರಿಂದಃ**

1) ಕಳೆದ ಆರು ತಿಂಗಳ ಹಿಂದೆ ನಿಪಿ.10 ಮತ್ತು 11 ರ ದಾಖಲೆಯನ್ನು ನನಗೆ ವಾದಿ ರಮೇಶ್ ಬಾಬು ರವರು ನೀಡಿದ್ದರು. ಸದರಿ ದಾಖಲೆಗಳು ಮೊದಲು ಎಲ್ಲಿ ಇದ್ದವು ಎಂಬ ಬಗ್ಗೆ ನಾನು ಆತನನ್ನು ವಿಚಾರಣೆ ಮಾಡಿಲ್ಲ. ನಿಪಿ.9 ರ ದಾಖಲೆ ಯಾವ ಕಾಲಕ್ಕೆ ನಮಗೆ ಸಿಕ್ಕಿತ್ತು ಎಂಬ ಬಗ್ಗೆ ಈಗ ನೆನಪಿಲ್ಲ. ಸದರಿ ದಾಖಲೆಯನ್ನು ನನಗೆ ವಾದಿ ರಮೇಶ್ ಬಾಬು ರವರು ಆರು ತಿಂಗಳ ಹಿಂದೆ ನೀಡಿದ್ದರು. ಆ ರೀತಿ ರಮೇಶ್ ಬಾಬು ರವರು ಆರು ತಿಂಗಳ ಹಿಂದೆ ದಾಖಲೆಗಳನ್ನು ನೀಡಿಲ್ಲ ಮತ್ತು ಆ ರೀತಿ ಆತ ನನಗೆ ದಾಖಲೆಗಳನ್ನು ನೀಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ವಾದಿ ರಮೇಶ್ ಬಾಬು ನನಗೆ ನೀಡಿದ ಸಮಯದಲ್ಲಿಯೇ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇತ್ತೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮತ್ತು 1ನೇ ಪ್ರತಿವಾದಿ ಶಾಮೀಲಾಗಿ ನಿಪಿ.9 ರ ದಾಖಲೆಯನ್ನು ಪಡೆದು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

2) ನಿಪಿ.9 ರ ದಾಖಲೆಯ ದೃಢಿಕೃತ ಪ್ರತಿಯನ್ನು ಪಡೆದುಕೊಳ್ಳಲು ಯಾರು ಅರ್ಜಿ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ.9 ರಿಂದ 11 ರ ದಾಖಲೆಗಳನ್ನು 1ನೇ ಪ್ರತಿವಾದಿ ಮಂಜುಳಾ ರವರಿಂದ ಪಡೆದು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿ ರಮೇಶ್ ಬಾಬು, ನಾನು ಮತ್ತು 1ನೇ ಪ್ರತಿವಾದಿ ಶಾಮೀಲಾಗಿ 3ನೇ ಪ್ರತಿವಾದಿಯಿಂದ ಅಕ್ರಮವಾಗಿ ಲಾಭ ಗಳಿಸುವ ಸಲುವಾಗಿ ದಾಖಲೆಗಳನ್ನು ಸಲ್ಲಿಸಿ ಈ ಸುಳ್ಳು ಪ್ರಕರಣ ಹೂಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**

**ನ್ಯಾಯಾಲಯ, ಚನ್ನಪಟ್ಟಣ.**